ಮಾಗಡಿ ಪುರಸಭೆಯ ಸರ್ವೆ ನಂ. 81ನ್ನು ಭೂಸ್ವಾಧೀನಪಡಿಸುವ ಬಗ್ಗೆ

1745 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಪುರಸಭೆಯ ವಸತಿಹೀನರಿಗೆ ಸರ್ಕಾರದ ಆದೇಶ ಸಂಖ್ಯೆ, ವನಇ 111 ರ ರೀತ್ಯ ಸೈಟುಗಳನ್ನು ಕೊಡಲು ಮಾಗಡಿ ಟೌನಿನಲ್ಲಿ ಸರ್ವೆನಂ. 81ನ್ನು ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಭೂಮಾಲೀಕರು ಭೂಸ್ವಾಧೀನದ ವಿಚಾರದಲ್ಲಿ ರಾಜ್ಯದ ಶ್ರೇಷ್ಠ ನ್ಯಾಯಾಲಯಕ್ಕೆ ಹೋಗಿ ಅಲ್ಲಿ ಭೂಸ್ವಾಧೀನ ಮಾಡುವ ಕ್ರಮ ಎತ್ತಿಹಿಡಿದರೂ ಸಹ ಸರ್ಕಾರ ಈ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳದಿರಲು ಕಾರಣವೇನು?

ಇ) ಸರ್ಕಾರವು ಈ ಜಾಗವನ್ನು ಭೂಸ್ವಾಧೀನಮಾಡಿಕೊಳ್ಳಲು ಏನಾದರೂ ತೊಂದರೆ ಇದೆಯೇ? ಇಲ್ಲದಿದ್ದಲ್ಲಿ ಯಾವಾಗ ಸ್ವಾಧೀನ ಮಾಡುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಈ ಕುರಿತು ಉಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿರುವುದರಿಂದ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಳೆಯ ನೀರಿನ ಅಳತೆ ಮಾಪಕಗಳ ಸಂಖ್ಯೆ.

1738 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) :
ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಮಳೆ ನೀರಿನ ಪ್ರಮಾಣ ಅಳತೆ ಮಾಪಕ ಎಷ್ಟು ಇದೆ?

ಆ) ಹಾಲಿ ಇರುವ ಸೌಲಭ್ಯದಿಂದ ಪೂರ್ಣ ಮಾಹಿತಿ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಪ್ರತಿ ಮಂಡಲದ ಕೇಂದ್ರದಲ್ಲಿ ಒಂದೊಂದು ಅಳತೆ ಮಾಪನವನ್ನು ಸ್ಥಾಪಿಸಿದರೆ ಸರಿಯಾದ ಮಾಹಿತಿ ಸಿಗುವ ಸಾಧ್ಯತೆಯಿರುವುದರಿಂದ ಈ: ಬಗ್ಗೆ ನೀರಿನ ಅಳತೆ ಮಾಪನವನ್ನು ಪ್ರತಿ ಮಂಡಲದ ಕೇಂದ್ರದಲ್ಲಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) 1150

ಆ) ಇಲ್ಲ

ಇ) ಪರಿಶೀಲನೆಯಲ್ಲಿದೆ.

ಕೆ.ಎಂ.ಎ.ಎಸ್. ಅಧಿಕಾರಿಗಳ ವಿವರ ಮತ್ತು ಪೌರಸೇವಾ ನೌಕರರುಗಳ ಮುಂಬಡ್ತಿ.

1740 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಪುರಸಭೆ ಮತ್ತು ಎಷ್ಟು ನಗರಸಭೆಗಳಿವೆ?